

ಒಂದು ಸಹಜವಾದ ಬದುಕು ಸಿಕ್ಕಿತೆಂದಾರೆ ಇಂತಹ ತಪ್ಪುಗಳಾಗುವುದಿಲ್ಲ... ನೋಡಿ, ನನಗೆ ಮದುವೆಯಾಗದಿದ್ದರೂ ಚಿಂತೆಯಿಲ್ಲ. ವಿಷಯವನ್ನು ಮುಚ್ಚಿಟ್ಟು ನಾವಿಬ್ಬರು ಮದುವೆಯಾಗಿ ನಾಳೆ ನಿತ್ಯ ಅನುಭವಿಸಬೇಕಿದ್ದ ನೋವನ್ನು ನೀವು, ನಿಮ್ಮನ್ನು ನನ್ನೆದುರು ಮುಕ್ತವಾಗಿ ತೆರೆದುಕೊಂಡು ಇಲ್ಲವಾಗಿಸಿದ್ದೀರಿ. ಅದಕ್ಕೋಸ್ಕರ ನಿಮಗೆ ತುಂಬಾ ತುಂಬಾ ಧನ್ಯವಾದಗಳು' ಎಂದು ಕರುಣಾಕರನಿಗೆ ಕರಜೋಡಿಸಿದಳು ಸವಿತಾ. ಪ್ರತಿವಂದಿಸಿ ಬೀಳ್ಕೊಟ್ಟನು ಕರುಣಾಕರ.

* * *

ನವೋಲ್ಲಾಸವೊಂದು ಮೈಮನವನ್ನು ಹೊಕ್ಕಂತೆಯೇ ಮನೆಗೆ ಬಂದಿದ್ದನು ಕರುಣಾಕರ. ಮಗನಿಗೆದುರಾದ ಶಾರದಮ್ಮನವರು ಮಗನ ಮುಖದ ಕಳೆಯನ್ನು ಕಂಡು ಬೇರೆಯದೇ ಭಾವಿಸಿದರು. ಯಾಕೆಂದರೆ ಮಗಾ ಸವಿತಾ ಜೊತೆ ಹೊರಗಡೆ ಹೋಗಿದ್ದು ಅವರಿಗೆ ತಿಳಿದಿತ್ತು. ಕರುಣಾಕರ ತನ್ನ ಕೋಣೆಯೆಡೆ ನಡೆದಿದ್ದೇ ಶಾರದಮ್ಮನವರು ಸಾವಿತ್ರಿಯ ಮನೆಯೆಡೆ ನಡೆದರು.

ಕರುಣಾಕರ ಕೋಣೆಗೆ ಬಂದವನೇ ಅಟ್ಟದ ಮೇಲೆ ಹಾಕಿದ್ದ ತನ್ನ ಹಳೆಯ ಪೆಟ್ಟಿಗೆಯನ್ನು ಕೆಳಗಿಳಿಸಿ, ಅದರ ದೂಳು ಕೊಡವಿದನು, ಮುಚ್ಚಳ ತೆರೆದನು. ಒಳಗಡೆ ಅವನು ನಾಟಕಕ್ಕೆ ಬಳಸುತ್ತಿದ್ದ ಸೀರೆ, ರವಿಕೆ, ಟೋಪನ್, ಬಳೆ, ನೆಕ್ಲೆಸ್, ಮೇಕಪ್‌ಸೆಟ್ ಮುಂತಾದ ವಸ್ತುಗಳು ಅದರಲ್ಲಿದ್ದವು. ಸುಲೋಚನಾಳ ಸಾವಿನ ನಂತರ ಅವನು ಸ್ತ್ರೀವೇಷ ಹಾಕುವುದನ್ನೇ ಬಿಟ್ಟು, ನಾಟಕವನ್ನು ತೊರೆದಿದ್ದನು. ಆದರೆ ಇದೀಗ ತಾನು ಹೆಣ್ಣಾಗಬೇಕೆಂಬ ಅದಮ್ಯವಾದ ಬಯಕೆ ಅವನನ್ನು ಮತ್ತೆ ಕಾಡಿತು. ಪೆಟ್ಟಿಗೆಯಲ್ಲಿದ್ದ ಜುಮುಕಿಯೊಂದನ್ನು ಕೈಗೆತ್ತಿಕೊಂಡು, ಹೋಗಿ ಕನ್ನಡಿಯ ಮುಂದೆ ನಿಂತು ಅದನ್ನು ಕಿವಿಯ ಬಳಿ ಹಿಡಿದು ಕುಣಿಸಿದನು. ಸ್ಟೋನ್‌ನ ನೆಕ್ಲೆಸ್ ಒಂದನ್ನು ಕತ್ತಿಗೆ ಹಾಕಿಕೊಂಡು ಸಂಭ್ರಮಿಸಿದನು. ಪಕ್ಕನೆ ಮುಖದ ತುಂಬಾ ಹರಡಿಕೊಂಡ ಗಡ್ಡ ಮೀಸೆಗಳು ವಿಕಾರವಾಗಿ ಗೋಚರಿಸಿದವು. ದಟ್ಟನೆಯ ಹುಬ್ಬು ಮುಖದ ಅಂದವನ್ನೇ ಕೆಡಿಸಿದೆ ಎಂದೆನಿಸಿತು. ರಾಜೇಶನಂತೆ ತಾನೂ ಹುಬ್ಬನ್ನು ಒಪ್ಪವಾಗಿಸಬೇಕೆಂದುಕೊಂಡನು. ಜುಮುಕಿಯನ್ನು ಮತ್ತೆ ಪೆಟ್ಟಿಗೆಯಲ್ಲಿರಿಸಿ, ತಾನು ಯಾವಾಗಲೂ ನಾಟಕದಲ್ಲಿ ಇಷ್ಟಪಟ್ಟು ಉಡುತ್ತಿದ್ದ ಸೀರೆಯನ್ನು ಕೈಗೆತ್ತಿಕೊಂಡನು. ಮನಸ್ಸು ತಡೆಯಲಾರದೆ ಅದನ್ನು ಉಟ್ಟುಕೊಂಡು ಕನ್ನಡಿ ನೋಡಿಕೊಂಡವನಿಗೆ ಒಳಗೊಳಗೇ ಖುಷಿ.

ಆಗಲೇ ಬಾಗಿಲ ಬಳಿ ಬಂದು ನಿಂತು ಇದೆಲ್ಲವನ್ನೂ ನೋಡುತ್ತಿದ್ದ ಶಾರದಮ್ಮನವರಿಗೆ ಮಗನ ಅವತಾರವನ್ನು ಕಂಡು ಸಿಟ್ಟು ನೆತ್ತಿಗೇರಿತ್ತು. ಸಾವಿತ್ರಿಯ ಮನೆಗೆ ಹೋದವರಿಗೆ ಸಾವಿತ್ರಿ ತಂಗಿ ಸವಿತಾ, 'ನಾನು ನಿಮ್ಮ ಮಗನನ್ನು ಮದುವೆ ಮಾಡಿಕೊಳ್ಳುವುದಿಲ್ಲ...' ಎಂದಿದ್ದು ಮುಖಕ್ಕೆ ಹೊಡೆದಂತಾಗಿತ್ತು.

'ಏನೋ ಇದು ನಿನ್ನ ಅವತಾರ?... ಮತ್ತೆ ನಾಟಕ ಆಡೋದಿಕ್ಕೆ ಶುರುಹಚ್ಕೊಂಡ್ಯಾ ಹೇಗೆ?' ಎಂದು ಜೋರು ಧ್ವನಿಯಲ್ಲಿ ಕೇಳಿದರು.

'ಇದು ನಾಟಕ ಅಲ್ಲಮ್ಮ' ಕರುಣಾಕರ ನುಡಿದನು.

'ಮತ್ತೆ?' ಅವರ ಮುಖ ಕೋಪದಿಂದ ಕೆಂಪಾಗಿತ್ತು.

'ಇದೇ ನನ್ನ ನಿಜವಾದ ಬದುಕು. ನಾನಿಷ್ಟರವರೆಗೆ ಬದುಕುತ್ತಿದ್ದೆನಲ್ಲ ಅದು ನಾಟಕ' ಎಂದು ದೃಢವಾದ ಧ್ವನಿಯಲ್ಲಿ ನುಡಿದನು.

'ಕರುಣಾಕರ ನೀನು...' ಶಾರದಮ್ಮನವರ ಮಾತನ್ನವನು ಅರ್ಧಕ್ಕೆ ತಡೆದನು.

'ಹೌದಮ್ಮ... ಇಷ್ಟರವರೆಗೆ ಫ್ಯಾಮಿಲಿ, ಸೊಸೈಟೀಂತ ಹೇಳಿ ನಾನು ನನ್ನ ಬದುಕನ್ನು ಕಳ್ಕೊಂಡುಬಿಟ್ಟಿದ್ದೆ. ಆದ್ರೆ ಇನ್ನು ಹಾಗಿಲ್ಲ. ನಾನು, ನನ್ನ ಬದುಕನ್ನೇ ಬದುಕುತ್ತೇನೆ' ಅವನ ಮಾತಿನಲ್ಲೊಂದು ನಿರ್ಧಾರವಿತ್ತು. ಶಾರದಮ್ಮನವರು ಗಡಿಗೆ ಗಾತ್ರದ ಮುಖವನ್ನು ಹೊತ್ತು ಅಲ್ಲಿಂದ ಸರಿದರು. ಕರುಣಾಕರ ತನ್ನ ಬದುಕನ್ನು ಒಂದು ಸವಾಲಾಗಿ ಸ್ವೀಕರಿಸಿ ತಡವಾಗಿಯಾದರೂ ದೃಢವಾದ ಹೆಜ್ಜೆಯನ್ನಿಟ್ಟಿದ್ದನು... ●